# ಪುಸ್ತಕ ಪರಿಚಯ

*Photographs of Swami Vivekananda*:
Compiled and Researched by Members of the Vedanta Society of Northern California.
ಪ್ರಕಾಶಕರು: ಶ್ರೀರಾಮಕೃಷ್ಣ ಮಠ, ಚೆನ್ನೈ.
ಪುಟಗಳು : xviii + 286 ಬೆಲೆ: ರೂ.200/-

**ಮಾ**ನವ ತನ್ನ ಜೀವನ ಪಯಣದಲ್ಲಿ ಒಂದು ಆಸರೆ, ಊರುಗೋಲನ್ನು ಸದಾ ಬಯಸುತ್ತಾನೆ. ದಿವ್ಯಗುಣಗಳನ್ನೂ ಆತ್ಮಸಂಯಮವನ್ನೂ ಪ್ರತಿನಿಧಿಸುವ ವ್ಯಕ್ತಿಗಳು ಒಂದು ಸಮಾಜಕ್ಕೇ, ಇಡೀ ಜನಸಮುದಾಯಕ್ಕೇ ಸ್ಫೂರ್ತಿಯ ಸೆಲೆಯಾಗಿದ್ದು, ಅವರ ಜೀವನ-ವಾಣಿಗಳನ್ನಾಧರಿಸಿ ಹೊಸ ದಿಗಂತಗಳೇ ಮಾನವನ ದೃಷ್ಟಿಪಥಕ್ಕೆ ತೆರೆದುಕೊಳ್ಳುತ್ತವೆ. ಇಂತಹ ವ್ಯಕ್ತಿಗಳ ಪ್ರತಿಯೊಂದು ನಡೆ, ನುಡಿಯನ್ನು ನೆನಪಿನಲ್ಲಿರಿಸಿಕೊಳ್ಳಲು ಸಾಹಿತ್ಯರಾಶಿಯೇ ಸೃಷ್ಟಿಯಾಗುವುದೂ ಸಹಜವೆ. ನಮ್ಮ ಪುರಾಣ ಇತಿಹಾಸಗಳೆಲ್ಲ ಇಂತಹ ಮಹಾಮಹಿಮರ ಗಾಥೆಗಳೇ.

ಸ್ವಾಮಿ ವಿವೇಕಾನಂದರನ್ನು ಕಂಡವರೆಲ್ಲ ಅವರನ್ನು ಒಂದು ಅದ್ಭುತವೆಂದೇ ವಿವರಿಸಿದ್ದಾರೆ. ಪರಿಪೂರ್ಣತೆಯ ಸಾಕಾರದಂತಿದ್ದ ಸ್ವಾಮೀಜಿಯನ್ನು ಕಂಡು ಪ್ರಭಾವಿತರಾಗದವರು ವಿರಳ. ಅವರನ್ನು ಸಂಧಿಸಲು, ಅವರೊಂದಿಗೆ ಎರಡು ಮಾತನಾಡಲು ಜನ ತವಕಿಸುತ್ತಿದ್ದರು. ನೆನಪಿಗಾಗಿ ಅನುರಾಗಿಗಳು ಹಲವು ಬಾರಿ ಅವರ ಭಾವಚಿತ್ರಗಳನ್ನು ತೆಗೆಸಿ, ಜೋಪಾನವಾಗಿ ಸಂರಕ್ಷಿಸಿದ್ದರು.

ಉತ್ತರ ಕ್ಯಾಲಿಫೋರ್ನಿಯಾದ ವೇದಾಂತ ಸೊಸಾಯಿಟಿಯ ಸದಸ್ಯರು ಸ್ವಾಮಿ ವಿವೇಕಾನಂದರ ಎಲ್ಲ ಭಾವಚಿತ್ರಗಳನ್ನು ಒಂದೆಡೆ ಒಗ್ಗೂಡಿಸಿ, ಆ ಚಿತ್ರಗಳನ್ನು ತೆಗೆದ ಸಂದರ್ಭ, ಸನ್ನಿವೇಶಗಳನ್ನು ವಿವರಿಸಿ ಒಂದು ಹೊಸ ಸಂಕಲನವನ್ನು ರೂಪಿಸಿದ್ದಾರೆ. ಬಲಗಡೆಯ ಪುಟಗಳಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರಗಳನ್ನು ಕೊಟ್ಟಿದ್ದು, ಎಡಗಡೆಯ ಪುಟಗಳಲ್ಲಿ ವಿವರಣೆಯೊಂದಿಗೆ ಸ್ವಾಮೀಜಿಯ ಸ್ಫೂರ್ತಿದಾಯಕ ವಾಣಿಯನ್ನೂ ನೀಡಲಾಗಿದೆ. ಸುಂದರ ಮುದ್ರಣವೂ ಪುಸ್ತಕದ ಮೆರುಗನ್ನು ಹೆಚ್ಚಿಸಿದೆ. ಇಂತಹ ಒಬ್ಬ ವ್ಯಕ್ತಿ ಇದ್ದರೇ, ಹೇಗಿದ್ದರು, ಏನು ಹೇಳಿದರು-ಮಾಡಿದರು ಎನ್ನುವ ಮುಂದಿನ ಪೀಳಿಗೆಯ ಎಲ್ಲ ಪ್ರಶ್ನೆಗಳಿಗೂ ಉತ್ತರ ಈ ಪುಸ್ತಕ. ೧೧೬ ಚಿತ್ರಗಳನ್ನೊಳಗೊಂಡ ೨೮೬ ಪುಟಗಳಿಂದ ಕೂಡಿದ ಈ ಬೃಹದ್ಗ್ರಂಥವನ್ನು ಉತ್ತಮ ಹಾಳೆಯಲ್ಲಿ ಮುದ್ರಿಸಿ ಕೇವಲ ೨೦೦ರೂಪಾಯಿ ಗಳಿಗೆ ನೀಡುತ್ತಿರುವ ಚೆನ್ನೈನ ರಾಮಕೃಷ್ಣ ಮಠವು ವಿವೇಕಾನಂದರ ಸ್ಮರಣೆಯನ್ನು ಜನರಲ್ಲಿ ಯಥಾರ್ಥವಾಗಿ ಮೂಡುವಂತೆ ಮಾಡಿದೆ. ಉತ್ತರ ಕ್ಯಾಲಿಫೋರ್ನಿಯ ವೇದಾಂತ ಸೊಸೈಟಿಯ ಸದಸ್ಯರು ಬಹಳ ಶ್ರಮವಹಿಸಿ ಪ್ರೀತಿಯ ನಿವೇದನೆಯಾಗಿ ನೀಡಿರುವ ಈ ಸುಂದರ ಚಿತ್ರ ಸಂಕಲನ ಸ್ವಾಮಿ ವಿವೇಕಾನಂದರನ್ನು ಪ್ರೀತಿಸುವ ಪ್ರತಿಯೊಬ್ಬರಿಗೂ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

—ಸ್ವಾಮಿ ಆತ್ಮಜ್ಞಾನಂದ

ಭಕ್ತಿಕೌಮುದೀ-ವ್ಯಾಖ್ಯಾನಸಹಿತಮ್
ನಾರದಭಕ್ತಿಸೂತ್ರಮ್
ಮೂಲಕನ್ನಡ: ಸ್ವಾಮಿ ಹರ್ಷಾನಂದ ಪುರೀ.
ಸಂಸ್ಕೃತ ಅನುವಾದ: ಡಾ. ಎಂ.ಇ. ರಂಗಾಚಾರ್ಯ.
ಪ್ರಕಾಶಕರು :ರಾಮಕೃಷ್ಣ ಮಠ, ಬೆಂಗಳೂರು
ಪುಟಗಳು xxii + 146 ಬೆಲೆ : ರೂ. 50/-

**ಸೃ**ಷ್ಟಿ ವೃತ್ತಮಯವಾದುದು, ಪ್ರತಿಯೊಂದೂ ಆರಂಭವಾದುದರೆಡೆಗೇ ಸಾಗಿ ಅದರೊಡನೆ ಸೇರಿದಾಗ ಅದಕ್ಕೆ ನಿಲುಗಡೆ. ಅಲ್ಲಿ (ಆಗ) ಪರಿಪೂರ್ಣತೆ. ಈ ಪರಿಪೂರ್ಣತೆಯನ್ನು ಹೊಂದುವುದೇ ಮಾನವಜೀವನದ ಸಾರ್ಥಕತೆ. ಇದನ್ನು ಹೊಂದಲು ವಿಭಿನ್ನ ಮಾರ್ಗಗಳಿವೆ. ಅವುಗಳಲ್ಲಿ ಭಕ್ತಿಯೂ ಒಂದು.

ಇದು ಅತ್ಯಂತ ಸುಲಭವಾದುದು. ಏಕೆಂದರೆ ಎಲ್ಲರೂ ಪ್ರೀತಿಸಬಲ್ಲರು. ಈ ಪ್ರೀತಿ ಆ ಭಗವಂತನಲ್ಲಿ ಉತ್ಕಟವಾದರೆ ಅದೇ ಭಕ್ತಿಯಾಗುವುದು (ಸಾತ್ವಸ್ಮಿನ್ ಪರಮಪ್ರೇಮರೂಪಾ). ಇಂತಹ ಭಕ್ತಿಯನ್ನು ಕುರಿತು ತಿಳಿಸುವ ಗ್ರಂಥವೇ 'ನಾರದಭಕ್ತಿಸೂತ್ರ'. ಇದು ಸ್ಪಷ್ಟವಾದ ಅರ್ಥವುಳ್ಳ, ಚಿಕ್ಕಚಿಕ್ಕ ವಾಕ್ಯರೂಪ ಸೂತ್ರಗಳಲ್ಲಿ ರಚಿತವಾಗಿದೆ. ಸಾಮಾನ್ಯವಾಗಿ ಇಂತಹ ಸೂತ್ರಗ್ರಂಥಗಳಿಗೆ ವಿವರಣೆ ನೀಡುವ ಭಾಷ್ಯಾದಿಗಳು ಸಂಸ್ಕೃತದಲ್ಲೇ ಇರುತ್ತವೆ. ಆದರೆ ಈ ಗ್ರಂಥಕ್ಕೆ ಸಂಸ್ಕೃತದ ಯಾವ ಭಾಷ್ಯವೂ ದೊರೆತಿಲ್ಲ. ಈ ಕಾರ್ಯವನ್ನು ತರ್ಕ ವೇದಾಂತ ವಿದ್ವಾಂಸರಾದ ಶ್ರೀಮಾನ್ ಎಂ.ಇ. ರಂಗಾಚಾರ್‌ರವರು ಈ ಅನುವಾದದ ಮೂಲಕ ನೆರವೇರಿಸಿದ್ದಾರೆ.

ಶ್ರೀಮತ್ ಸ್ವಾಮಿ ಹರ್ಷಾನಂದಜೀ ಮಹಾರಾಜ್‌ರವರು ಈ ಗ್ರಂಥಕ್ಕೆ ವೇದ, ಪುರಾಣ, ಮಹಾಭಾರತ, ಭಾಗವತಾದಿ ಗ್ರಂಥಗಳಿಂದ ಶ್ಲೋಕಗಳನ್ನು ಉದ್ಧರಿಸಿ, ಸುಂದರವೂ ವಿಸ್ತೃತವೂ ಆದ ಭಾಷ್ಯವನ್ನು ಕನ್ನಡದಲ್ಲಿ ರಚಿಸಿದ್ದಾರೆ. ಈ ಸೂತ್ರಗಳ ಸಾರಾಮೃತವನ್ನು ತಮ್ಮ ಜೀವಿತಾವಧಿಯಲ್ಲಿ ಅನುಭವಿಸಿದ ಶ್ರೀರಾಮಕೃಷ್ಣರ ಅನುಭವಾಮೃತ ಸೂಕ್ತಿಗಳನ್ನೂ ಉದ್ಧರಿಸಿದ್ದಾರೆ.

ಶ್ರೀಮಾನ್ ಎಂ.ಇ. ರಂಗಾಚಾರ್‌ರವರು ಸರಳವೂ ಸುಂದರವೂ ಆದ ಭಾಷೆಯಲ್ಲಿ ಮೂಲರಸ ಪರಿಪೋಷಕವಾಗಿ ಸ್ವಾಮಿ ಹರ್ಷಾನಂದಜೀ ಮಹಾರಾಜ್‌ರವರ ಕನ್ನಡಭಾಷ್ಯವನ್ನು ಸಂಸ್ಕೃತ ಭಾಷೆಗೆ ಅನುವಾದ ಮಾಡಿದ್ದಾರೆ. ಸ್ವಲ್ಪ ಸಂಸ್ಕೃತ ಬಲ್ಲವನೂ ಓದಿ ಅರ್ಥಮಾಡಿಕೊಳ್ಳಬಲ್ಲ ಮತ್ತು ಸಂಸ್ಕೃತ ಭಾಷಾಭಿಜ್ಞನೂ ಭಾವಾಭಿವ್ಯಕ್ತಿಪೂರ್ಣ ಭಾಷಾ ಸೌಂದರ್ಯಕ್ಕೆ ಮೈಮನ ಮರೆಯಬಲ್ಲ. ಈ ಕೃತಿ ಸಂಸ್ಕೃತ ಭಾಷಾಭಿಮಾನಿಗಳಿಗೂ ಸಂಸ್ಕೃತ ರಸಿಕರಿಗೂ ಕನ್ನಡವನ್ನರಿಯದ ಸಂಸ್ಕೃತ ಭಾಷಾಭಿಜ್ಞ ಸಹೃದಯರಿಗೂ ಆದರಣೀಯವಾಗಿದೆ.

—ಡಾ. ಕೆ. ಎಲ್. ಪ್ರಸನ್ನಾಕ್ಷಿ.